■ ವಿಶಾಖ ಎನ್.

# 4XDಯಲ್ಲಿ ಪೊನ್ನಿಯಿನ್ ಸೆಲ್ವನ್

‘ಪೊನ್ನಿಯಿನ್ ಸೆಲ್ವನ್ 2’ ತಮಿಳು ಸಿನಿಮಾ ಬಿಡುಗಡೆಗೆ ಸಿದ್ಧಗೊಳ್ಳುತ್ತಿದೆ. ಮೊದಲ ಭಾಗದಿಂದ ತಮ್ಮ ಫಾರ್ಮ್‌ಗೆ ಮರಳಿ ಬಂದಿರುವ ಮಣಿರತ್ನಂ ಎರಡನೇ ಭಾಗವನ್ನು ಇನ್ನಷ್ಟು ಆಕರ್ಷಕಗೊಳಿಸುವ ಸಾಧ್ಯತೆಗಳಿಗೆ ಮುಖಾಮುಖಿಯಾಗಿದ್ದಾರೆ. ದಕ್ಷಿಣ ಭಾರತದ ಸಿನಿಮಾ ಇತಿಹಾಸದಲ್ಲಿಯೇ ಮೊದಲ ಬಾರಿಗೆ 4 ಎಕ್ಸ್‌ಡಿ ಫಾರ್ಮ್ಯಾಟ್‌ನಲ್ಲಿಯೂ ಸಿನಿಮಾ ತೆರೆಕಾಣಲಿದೆ. ಇದುವರೆಗೆ ಮೂರು ಆಯಾಮದ ಚಲನಚಿತ್ರಗಳನ್ನು ನೋಡಿ ಸುಖಿಸಿದ್ದ ಪ್ರೇಕ್ಷಕರಿಗೆ ಇದು ಬೇರೆಯದೇ ಅನುಭವ ನೀಡಲಿದೆ ಎನ್ನಲಾಗುತ್ತಿದೆ.

ಸಿನಿಮಾದ ನಿರ್ಮಾಣ ಸಂಸ್ಥೆ ಲೈಕಾ ಈ ಕುರಿತ ಮಾಹಿತಿಯನ್ನು ಟ್ವೀಟ್ ಮಾಡಿದೆ. ಏಪ್ರಿಲ್ 28ರಂದು ತೆರೆಕಾಣಲಿರುವ ಈ ಚಿತ್ರದಲ್ಲಿ ವಿಕ್ರಮ್, ಐಶ್ವರ್ಯಾ ರೈ, ಕಾರ್ತಿ, ತ್ರಿಶಾ, ಜಯರಾಂ ರವಿ ಅಭಿನಯಿಸಿದ್ದಾರೆ. ಎ.ಆರ್. ರೆಹಮಾನ್ ಸಂಗೀತ ಮೊದಲ ಭಾಗದಲ್ಲಿ ಮೋಡಿ ಮಾಡಿತ್ತು. ಎರಡನೇ ಭಾಗದಲ್ಲಿನ ಸಂಗೀತದ ಶಾಸ್ತ್ರೀಯ ಪಲುಕುಗಳನ್ನು ಗುನುಗುತ್ತಿರುವ ಅಭಿಮಾನಿಗಳೂ ಇದ್ದಾರೆ.

ಸಿನಿಮಾದ ಮೊದಲ ಭಾಗವೇ 500 ಕೋಟಿ ರೂಪಾಯಿಯಷ್ಟು ವಹಿವಾಟು ನಡೆಸಿರುವ ಸುದ್ದಿ ಇದೆ. ಕಲ್ಕಿ ಕೃಷ್ಣಮೂರ್ತಿ ಕಾದಂಬರಿಯನ್ನು ಆಧರಿಸಿದ ಈ ಸಿನಿಮಾ ಮಣಿರತ್ನಂ ಅವರ ಬಹುವರ್ಷಗಳ ಕನಸು. ಅದು ದೊಡ್ಡಮಟ್ಟದಲ್ಲಿಯೇ ನನಸಾಗಿದೆ. ■





# ಮತ್ತೆ ಮದುವೆ ಬಂಧಕೆ ಮಲೈಕಾ

‘ಪಿಡಿಎ’ ಎಂಬ ಚುಟುಕು ರೂಪವೊಂದನ್ನು ಸರ್ಚ್ ಎಂಜಿನ್ ಆಪ್ಟಿಮೈಜೇಷನ್ ಬಲ್ಲವರು ಬಳಸುತ್ತಿರುವ ಕಾಲವಿದು. ‘ಪಬ್ಲಿಕ್ ಡಿಸ್‌ಪ್ಲೇ ಆಫ್ ಅಫೆಕ್ಷನ್’ ಎನ್ನುವುದು ಇದರ ವಿಸ್ತೃತ ರೂಪ. ಜೋಡಿಯೊಂದು ತನ್ನ ಕಕ್ಕುಲತೆಯನ್ನು ಸಾಮಾಜಿಕ ಜಾಲತಾಣಗಳ ಮೂಲಕ ತೋರ್ಪಡಿಸುವುದನ್ನು ಹೀಗೆ ‘ಪಿಡಿಎ’ ಎಂದು ಚುಟುಕಾಗಿ ಹೇಳುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಎಷ್ಟೋ ತಲೆಗಳು ಪ್ರೀತಿಯ ತೋರ್ಪಡಿಸುವಿಕೆಯನ್ನು ಮಾರುಕಟ್ಟೆ ಮಾಡಿರುವ ಹಲವು ಉದಾಹರಣೆಗಳಿವೆ. ವಿರಾಟ್ ಕೊಹ್ಲಿ ಹಾಗೂ ಅನುಷ್ಕಾ ಶರ್ಮ, ಮಹೇಂದ್ರ ಸಿಂಗ್ ಧೋನಿ ಹಾಗೂ ಸಾಕ್ಷಿ, ರಣವೀರ್ ಸಿಂಗ್ ಹಾಗೂ ದೀಪಿಕಾ ಪಡುಕೋಣೆ, ಕೆ.ಎಲ್. ರಾಹುಲ್ ಹಾಗೂ ಅಥಿಯಾ ಪ್ರೇಮ ಪ್ರಕರಣಗಳು ಇದಕ್ಕೆ ಉದಾಹರಣೆಗಳು. ಕಳೆದ ನಾಲ್ಕಾರು ವರ್ಷಗಳಿಂದ ಮಲೈಕಾ ಅರೋರಾ ಹಾಗೂ ಅರ್ಜುನ್ ಕಪೂರ್ ನಡುವಿನ ಬಾಂಧವ್ಯಕ್ಕೂ ಇಂಥದ್ದೇ ಮಾರುಕಟ್ಟೆ ಪ್ರಾಪ್ತಿಯಾಗಿದೆ.

ಅರ್ಬಾಜ್ ಖಾನ್ ಜತೆಗಿನ ಹದಿನೇಳು ವರ್ಷಗಳ ವಿವಾಹ ಬಂಧನವನ್ನು ತೊರೆದುಕೊಂಡು ತಮಗಿಂತ ಚಿಕ್ಕಪ್ರಾಯದ ಅರ್ಜುನ್ ಕಪೂರ್ ಜತೆಗೆ ಗುರುತಿಸಿಕೊಂಡವರು ಮಲೈಕಾ ಅರೋರಾ. ಅವರು ನಟಿಯಾಗಿ ಸದ್ದು ಮಾಡಿದ್ದಕ್ಕಿಂತ ಹೆಚ್ಚಾಗಿ ತಮ್ಮ ಫಿಟ್‌ನೆಸ್ ಮೂಲಕ ಪ್ರಚಾರ ಗಿಟ್ಟಿಸಿಕೊಂಡವರು. ‘ಮೂವಿಂಗ್ ಇನ್ ವಿತ್ ಮಲೈಕಾ’ ಎಂಬ ಕಾರ್ಯಕ್ರಮವು ಡಿಸ್ನಿ ಹಾಟ್‌ಸ್ಟಾರ್ ಒಟಿಟಿಯಲ್ಲಿ ಪ್ರಸಾರವಾಗುತ್ತಿದೆ. ಹಲವು ವರ್ಷಗಳಿಂದ ಡೇಟಿಂಗ್‌ನಲ್ಲೇ ಇರುವ ಅವರು 2019ರಲ್ಲಿ ತಮ್ಮ ಹಾಗೂ ಅರ್ಜುನ್ ಕಪೂರ್ ನಡುವಿನ ಪ್ರೇಮದ ಕುರಿತು ಘೋಷಣೆ ಮಾಡಿದ್ದರು. ಸಾಮಾಜಿಕ ಜಾಲತಾಣದಲ್ಲಿ ಈ ಬಗೆಗೆ ಅವರು ಹಾಕಿದ್ದ ಪೋಸ್ಟ್‌ಗಳನ್ನು ಅಭಿಮಾನಿಗಳು ಟೀಕಿಸಿದ್ದು ಕಡಿಮೆ. ಪರಸ್ಪರ ಗೌರವಭಾವ ಇರುವ ಯಾರೇ ಇಬ್ಬರು ಪ್ರೀತಿಸಿದರೂ ಉತ್ತಮ ಎಂದೇ ಪ್ರತಿಕ್ರಿಯಿಸಿದ್ದರು.

ಈಗ ಮಲೈಕಾ ಅವರಿಗೆ ಮತ್ತೆ ವಿವಾಹ ಬಂಧನಕ್ಕೆ ಸಿಲುಕಬೇಕು ಎನ್ನಿಸಿದೆ. ಅರ್ಜುನ್ ಕಪೂರ್ ಜೊತೆ ಮದುವೆಗೆ ದಿನ ಗೊತ್ತುಪಡಿಸಲು ತಾವು ಉತ್ಸುಕರಾಗಿ ಇರುವುದಾಗಿ ಹೇಳಿದ್ದಾರೆ.

‘ನನ್ನ ಮನಸ್ಸೀಗ ಹಾಯಾಗಿದೆ. ಇನ್ನು ಮೂವತ್ತು ವರ್ಷ ಇದೇ ಸ್ಥಿತಿಯಲ್ಲಿ ನಿರಾಳವಾಗಿರಬೇಕೆನ್ನುವುದು ಬಯಕೆ. ವಿವಾಹ ಬಂಧನದಲ್ಲಿಯೂ ನನಗೆ ನಂಬಿಕೆ ಇದೆ. ನಾನು, ಅರ್ಜುನ್ ಇಬ್ಬರೂ ಅದಕ್ಕೀಗ ಅಣಿಯಾಗಿದ್ದೇವೆ’ ಎಂದು ಮಲೈಕಾ ಆಡಿರುವ ಮಾತಿಗೂ ಸಿಕ್ಕಾಪಟ್ಟೆ ಲೈಕುಗಳು ಸಿಗುತ್ತಿವೆ. ■